# ಅಂಕೋಲ-ಹುಬ್ಬಳ್ಳಿ ಬ್ರಾಡ್‌ಗೇಜ್ ರೈಲು ಮಾರ್ಗ.

ಒಂದು ಪ್ರದೇಶದ ಅಭಿವೃದ್ಧಿಯಲ್ಲಿ ಸಾರಿಗೆ ಸಂಪರ್ಕಗಳು ಪ್ರಮುಖ ಪಾತ್ರ ವಹಿಸುತ್ತವೆ. ಅಭಿವೃದ್ಧಿಗೆ ಪೂರಕವಾದ ಸಾಧನ ಸಾಮಗ್ರಿಗಳ ಸಾಗಾಟಕ್ಕೆ ಸಾರಿಗೆ ಅತ್ಯಂತ ಅವಶ್ಯಕ. ಈ ಹಿನ್ನೆಲೆಯಲ್ಲಿ ರೈಲು ಮಾರ್ಗಗಳು ಪ್ರಮುಖ ಸಾರಿಗೆ ಸಾಧನವಾಗಿದೆ. ಹೊಸ ರೈಲು ಮಾರ್ಗಗಳು ಆ ಪ್ರದೇಶದ ಅಭಿವೃದ್ಧಿಗೆ ದಾರಿ ಮಾಡಿ ಕೊಡುತ್ತವೆ. ಆದರೆ ಈ ಅಭಿವೃದ್ಧಿಯ ಮಾರ್ಗಗಳು ಪರಿಸರ ನಾಶಕ್ಕೆ ಕಾರಣವಾಗುವದು ವಿಷಾದದ ಸಂಗತಿ. ಅಭಿವೃದ್ಧಿಯ ಹೆಸರಿನಲ್ಲಿ ಅರಣ್ಯ, ಜೀವ ವೈವಿಧ್ಯತೆಗಳ ನಾಶ ಹಲವು ಕಾಲಗಳಿಂದ ನಡೆದು ಬಂದಿದೆ.

## ಅಂಕೋಲಾ-ಹುಬ್ಬಳ್ಳಿ ರೈಲು ಮಾರ್ಗ ಮತ್ತು ಅದರ ಅವಶ್ಯಕತೆ.

ಭಾರತವು ಕಬ್ಬಿಣದ ಅದಿರನ್ನು ಉತ್ಪಾದಿಸುವ ಪ್ರಪಂಚದ ಪ್ರಮುಖ ರಾಷ್ಟ್ರಗಳಲ್ಲಿ ಒಂದಾಗಿದೆ. ಬಳ್ಳಾರಿ ಬಳಿಯ ಹೊಸಪೇಟೆಯು ಕಬ್ಬಿಣದ ಅದಿರನ್ನು ಉತ್ಪಾದಿಸುವ ಮುಖ್ಯ ಸ್ಥಳ. ನಮ್ಮ ದೇಶವು ರಪ್ತು ಮಾಡುವ ಪ್ರಮುಖ ವಸ್ತುಗಳಲ್ಲಿ ಕಬ್ಬಿಣದ ಅದಿರು ಒಂದಾಗಿದೆ. ಇದು ನಮ್ಮ ದೇಶಕ್ಕೆ ದೊಡ್ಡ ಪ್ರಮಾಣದಲ್ಲಿ ವಿದೇಶಿ ವಿನಿಮಯವನ್ನು ಗಳಿಸಿ ಕೊಡುತ್ತದೆ.

ಕಬ್ಬಿಣದ ಅದಿರನ್ನು ರಪ್ತು ಮಾಡಲು ಈಗಿರುವ ಮಾರ್ಗಗಳು:-
ಗೋವಾ ಮತ್ತು ಚೆನ್ನೈ ಬಂದರುಗಳು.

ಇವುಗಳಲ್ಲಿ ಗೋವಾ ಬಂದರನ್ನು ತಲುಪಲಿರುವ ರೈಲು ಮಾರ್ಗ - ಹುಬ್ಬಳ್ಳಿ-ವಾಸ್ಕೊ ಡಿ ಗಾಮಾ. ಈ ಮಾರ್ಗದ ಸದ್ಯದ ಸಾಗಾಣಿಕೆ ಸಾಮರ್ಥ್ಯ ೧ ಮಿಲಿಯನ್ ಟನ್‌ಗಳು ಮಾತ್ರ. ಆದರೆ ಬೇಡಿಕೆಯಿರುವದು ೧೫.೯೭ ಮಿಲಿಯನ್ ಟನ್ ಕಬ್ಬಿಣದ ಅದಿರಿಗೆ. ಈಗಿನ ಪ್ರಮುಖ ಸಾಗಾಣಿಕಾ ಮಾರ್ಗವಾದ ಹುಬ್ಬಳ್ಳಿ- ವಾಸ್ಕೊ ಡಿ ಗಾಮಾ ಮಾರ್ಗವು ಕ್ಯಾಸ್ಟಲ್‌ರಾಕ್- ಕುಲಮ್ ನಡುವೆ ಕಡಿದಾದ ಘಟ್ಟ ಪ್ರದೇಶವನ್ನು ಹೊಂದಿರುವದರಿಂದ ಈ ಮಾರ್ಗದಲ್ಲಿ ಸಾಗಾಣಿಕಾ ಸಾಮರ್ಥ್ಯ ಕಡಿಮೆಯಿದ್ದು ಅದು ವರ್ಷಕ್ಕೆ ಕೇವಲ ೭ ಮಿಲಿಯನ್ ಟನ್‌ಗಳು ಮಾತ್ರ. ಉಳಿದ ಬೃಹತ್ ಪ್ರಮಾಣದ ಬೇಡಿಕೆಯನ್ನು ಪೂರೈಸಲು ಬದಲಿ ರೈಲು ಮಾರ್ಗದ ಅವಶ್ಯಕತೆಯಿದೆ.

ಅಂಕೋಲ- ಹುಬ್ಬಳ್ಳಿ ನಡುವಿನ ರೈಲು ಮಾರ್ಗ ನಿರ್ಮಾಣವು ಕೊಂಕಣ ರೈಲು ಮಾರ್ಗದ ಮೂಲಕ ಗೋವಾ ತಲಪಲಿರುವ ಬದಲಿ ಮಾರ್ಗವಾಗಿದೆ. ಈ ಮಾರ್ಗದ ಮೂಲಕ ಹೆಚ್ಚಿನ ಪ್ರಮಾಣದಲ್ಲಿ ಕಬ್ಬಿಣದ ಅದಿರನ್ನು ಗೋವಾ ಬಂದರಿಗೆ ಸಾಗಿಸಬಹುದಾಗಿದೆ. ಅಲ್ಲದೆ ಮುಂದೆ ಕಾರವಾರ ಬಂದರು ವಿದೇಶಿ ವ್ಯಾಪಾರಕ್ಕೆ ತೆರೆದುಕೊಡಾಗ, ಈ ಬಂದರಿಗೂ ಸಂಪರ್ಕ ಕಲ್ಪಿಸುವ ಪ್ರಮುಖ ಮಾರ್ಗವಾಗಲಿದೆ. ಈ ಮಾರ್ಗದ ಮೂಲಕ ಸರಕು ಸಾಗಣೆಯ ವೆಚ್ಚ ಕಡಿಮೆಯಾಗುತ್ತದೆ. ಈ ರೈಲು ಮಾರ್ಗವು ಉತ್ತರ ಕನ್ನಡದ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ಕಾರಣವಾಗಲಿದೆ. ಕರಾವಳಿಯನ್ನು ಬಯಲು ಸೀಮೆಯೊಂದಿಗೆ ಜೋಡಿಸುವ ಕೊಂಡಿಯಾಗುತ್ತದೆ.

**ಅಂಕೋಲಾ-ಹುಬ್ಬಳ್ಳಿ ರೈಲು ಮಾರ್ಗದ ರೂಪು -ರೇಷೆ.**

-ರೈಲುಮಾರ್ಗ ನಿರ್ಮಾಣಕ್ಕಾಗಿ ಬಿಡುಗಡೆಗೊಂಡ ಹಣ **ರೂ.೧೦ ಕೋಟಿ.**

-ಯೋಜನೆಯ ಒಟ್ಟೂ ವೆಚ್ಚ **೪೮೩.೧೫ ಕೋಟಿ** ರೂಪಾಯಿಗಳು.

-ಹುಬ್ಬಳ್ಳಿಯಿಂದ ಅಂಕೋಲಾದವರೆಗಿನ ರೈಲು ಮಾರ್ಗದ ಉದ್ದ ಸುಮಾರು **೧೬೪** ಕಿ.ಮೀ.ಗಳು.

-ರೈಲು ಮಾರ್ಗದ ಪ್ರಾರಂಭ ಹುಬ್ಬಳ್ಳಿಯ ಕೇಂದ್ರ ರೈಲು ನಿಲ್ದಾಣ.

-ಹುಬ್ಬಳ್ಳಿಯಿಂದ ಪ್ರಾರಂಭವಾಗಿ ಯಲ್ಲಾಪುರ -ಸುಂಕಸಾಲ್ ಮೂಲಕ ಅಂಕೋಲಾದಲ್ಲಿ ಕೊಂಕಣ ರೈಲು ಮಾರ್ಗವನ್ನು ಸೇರಲಿದೆ.

→ ಇದರಲ್ಲಿ ಹುಬ್ಬಳ್ಳಿಯಿಂದ ಯಲ್ಲಾಪುರದವರೆಗಿನ **೭೫** ಕಿ.ಮೀ.ನಷ್ಟು ಬಯಲು ಪ್ರದೇಶ.

→ಯಲ್ಲಾಪುರದಿಂದ ಸುಂಕಸಾಲ್‌ವರೆಗಿನ **೫೬** ಕಿ.ಮೀ. ಪ್ರದೇಶವು ದಟ್ಟ ಅರಣ್ಯಗಳಿಂದ ಕೂಡಿದ ಪಶ್ಚಿಮಘಟ್ಟಗಳ ಸಹ್ಯಾದ್ರಿ ಪರ್ವತ ಶ್ರೇಣಿ ಪ್ರದೇಶ.

→ನಂತರದ ಸುಂಕಸಾಲ್‌ನಿಂದ ಅಂಕೋಲಾದವರೆಗಿನ ಪ್ರದೇಶವು ಚಿಕ್ಕ ಪುಟ್ಟ ಗುಡ್ಡಗಳಿಂದ ಕೂಡಿದೆ.

**ರೈಲು ಮಾರ್ಗ ನಿರ್ಮಾಣಕ್ಕೆ ಅವಶ್ಯಕವಾದ ಭೂ ಪ್ರದೇಶಗಳ ಪ್ರಮಾಣ.**

-ಮಾರ್ಗದ ಎರಡೂ ಕಡೆಗಳಲ್ಲೂ ೧೦ ಮೀಟರ್‌ವರೆಗಿನ ಪ್ರದೇಶ.

| | |
|---|---|
| ರೈಲು ಮಾರ್ಗಕ್ಕೆ ಬೇಕಾಗುವ ಒಟ್ಟೂ ಪ್ರದೇಶ | ೧೧೮೬ ಹೆಕ್ಟೇರ್‌ಗಳು. |
| ಅದರಲ್ಲಿ ಅರಣ್ಯ ಪ್ರದೇಶ | ೯೦೦ ,, |
| ನೀರಾವರಿ ಪ್ರದೇಶ | ೩೮ ,, |
| ಒಣಭೂಮಿ | ೨೩೫ ,, |
| built up garden land ( ಅಡಿಕೆ ತೋಟ) | ೧೩ ,, |

## ಅಂಕೋಲಾ -ಹುಬ್ಬಳ್ಳಿ ರೈಲು ಮಾರ್ಗದಿಂದ ಉಂಟಾಗುವ ಸಮಸ್ಯೆಗಳು.

### a)ಜನ-ಜೀವನದ ಮೇಲಾಗುವ ಪರಿಣಾಮ:-

ಈ ರೈಲು ಮಾರ್ಗದ ಇಕ್ಕೆಲಗಳಲ್ಲಿ ಬರುವ ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಯ ಜನರು ತೊಂದರೆಗೀಡಾಗುತ್ತಾರೆ.ಯಲ್ಲಾಪುರ,ಸುಂಕಸಾಲ್ಮತ್ತು ಅಂಕೋಲಾಗಳ ಮೂಲಕ ಹಾದು ಹೋಗುವ ರೈಲು ಮಾರ್ಗದ ಗುಂಟ ಬರುವ ಹಲವಾರು ಹಳ್ಳಿಗಳ ಅಂದರೆ ಮಿಶ್ರಿಕೈ, ರಾಮನಗುಳಿ, ತಂಬುರ್, ಕೈಗಾಡಿ, ಕಿರವತ್ತಿ, ರಾಮನಕೊಪ್ಪ, ಇಡಗುಂದಿ, ಬಿರಗದ್ದೆ, ಕಂಚಿನಹಾಳೆ, ಕೊಡ್ಲಗದ್ದೆ, ವಜ್ರಳ್ಳಿ, ~~ರಾಮನಗುಳಿ~~, ಹೆಬ್ಬೂಲು, ಹೊನ್ನಳ್ಳಿ, ಅಗಸೂರು, ನಂದಗದ್ದೆ ಜನರು ತಮ್ಮ ಮನೆ,ಮಠ,ವ್ಯವಸಾಯ ಭೂಮಿಗಳನ್ನು ಕಳೆದುಕೊಳ್ಳುತ್ತಾರೆ.ತಮ್ಮ ಕೃಷಿ ಭೂಮಿಯ ಬಗ್ಗೆ ದಾಖಲೆ ಹೊಂದಿದವರಿಗೆ ಪರಿಹಾರ ಸಿಗಬಹುದು. ಆದರೆ ಬಹುಸಂಖ್ಯೆಯಲ್ಲಿರಬಹುದಾದ ಅತಿಕ್ರಮಣದಾರರಿಗೆ ಯಾವ ಪರಿಹಾರವೂ ಸಿಗದೇ ಸಂಕಷ್ಟಕ್ಕೀಡಾಗಬಹುದು. ಯಲ್ಲಾಪುರ ಮತ್ತು ಅಂಕೊಲಾ ಭಾಗದ ಫಲವತ್ತಾದ ಪ್ರದೇಶಗಳು ರೈತರ ಕೈಬಿಟ್ಟು ಹೋಗಲಿವೆ.ಹೊಸ ಜಾಗ, ಪರಿಹಾರ ದೊರೆತರೂ ಅದು ಮೊದಲಿನ ಪ್ರಯೋಜನ ನೀಡಲಾರದು. ೩೮ ಹೆಕ್ಟೇರ್‌ನಷ್ಟು ನೀರಾವರಿ ಜಾಗ ಬಳಕೆಯಿಂದ ವಂಚಿತವಾಗಲಿದೆ.

### b) ಅರಣ್ಯ ನಾಶ :-

ಈ ರೈಲು ಮಾರ್ಗದ ನಿರ್ಮಾಣದಿಂದ ಹೆಚ್ಚು ಹಾನಿಯಾಗುವದು ಅರಣ್ಯ ಭೂಮಿಗೆ. ಯೋಜನೆಗೆ ಬೇಕಾಗುವ ಒಟ್ಟೂ ಭೂ ಪ್ರದೇಶದ **೭೫%** ಕ್ಕಿಂತಲೂ ಹೆಚ್ಚಿನ ಭಾಗ ಅರಣ್ಯದಿಂದ ಕೂಡಿದೆ. ಈಗಾಗಲೇ ಹಲವಾರು ಯೋಜನೆಗಳಿಗೆ ಗುರಿಯಾಗಿ ಸಾಕಷ್ಟು ವನ ಸಂಪತ್ತನ್ನು ಕಳೆದುಕೊಂಡಿರುವ ಪಶ್ಚಿಮ ಘಟ್ಟ ಪ್ರದೇಶವು ಈ ಮಾರ್ಗ ನಿರ್ಮಾಣದಿಂದ ಇನ್ನಷ್ಟು ಬಡವಾಗಲಿದೆ. ಬೆಲೆ ಬಾಳುವ ವೃಕ್ಷ ಸಂಪತ್ತು ನಾಶವಾಗಲಿದೆ. ಉದ್ದಿಮೆಗಳ ಆಗಮನಕ್ಕೆ ರಹದಾರಿ ಮಾಡಿಕೊಡುವ ರೈಲುಮಾರ್ಗವು ಆ ಮೂಲಕ ಪರಿಸರ ಮಾಲಿನ್ಯಕ್ಕೂ ಕಾರಣವಾಗುತ್ತದೆ. ನಿರಾಶ್ರಿತರಿಗೆ ಪುನರ್‌ವಸತಿ ನಿರ್ಮಿಸಿ ಕೊಡುವ ಕಾರ್ಯದಿಂದ ಮತ್ತಷ್ಟು ಕಾಡು ನಾಶವಾಗಲಿದೆ. ಈ ಯೋಜನೆಯಿಂದ ಜಿಲ್ಲೆಗೆ ಪ್ರಯೋಜನವಾಗುತ್ತದೆ ಎಂಬ ವಿಷಯ ಕೂಡ ಈಗ ನಂಬಿಗೆಯನ್ನು ಕಳೆದು ಕೊಂಡಿದೆ. ಈಗಾಗಲೇ ಜಿಲ್ಲೆಗೆ ಬಂದ ಹಲವಾರು ಯೋಜನೆಗಳು ಈ ಸಂಗತಿಯನ್ನು ನಿಜ ಗೊಳಿಸಿವೆ.

ಒಟ್ಟಿನಲ್ಲಿ ಅಂಕೋಲಾ-ಹುಬ್ಬಳ್ಳಿ ರೈಲು ಮಾರ್ಗ ನಿರ್ಮಾಣವು ದೇಶದ ಅಭಿವೃದ್ಧಿಗೆ ಪೂರಕವಾದರೂ ಜಿಲ್ಲೆಯ ಪರಿಸರದ ಮೇಲೆ ದುಷ್ಪರಿಣಾಮ ಬೀರುತ್ತದೆ. ಅಭಿವೃದ್ಧಿಯ ಹೆಸರಿನಲ್ಲಿ ಮತ್ತೊಮ್ಮೆ ಅರಣ್ಯವನ್ನು ಕಬಳಿಸುವ ಕಾರ್ಯ ಆರಂಭವಾಗುತ್ತದೆ.

ಎಲ್ಲಾ ಪಕ್ಷದ ರಾಜಕೀಯ ಮುಖಂಡರು ಈ ಯೋಜನೆಯ ಪರವಾಗಿ ಹೇಳಿಕೆ ನೀಡಿದ್ದಾರೆ. ಆದರೆ ಇದರಿಂದ ಅಮೂಲ್ಯವಾದ ಅರಣ್ಯ ಸಂಪತ್ತು ನಾಶವಾಗುವುದರ ಅರಿವಿಲ್ಲವೆ?

ಕೇಂದ್ರ ಸರಕಾರವು ಈ ಯೋಜನೆಗೆ ಅರಣ್ಯ ಸಂರಕ್ಷಣಾ ಕಾಯಿದೆ ಅಡಿಯಲ್ಲಿ ಪರವಾನಿಗೆ ನೀಡಿಲ್ಲ. ಆದರೂ ಸಹ ಈ ಯೋಜನೆ ಆಗಲೇಬೇಕೆಂಬ ಹಟ ನಮ್ಮ ರಾಜಕೀಯ ನೇತಾರರದ್ದು. ದೇಶದ ಕಾನೂನಿಗೆ ವಿರುದ್ಧವಾಗಿರುವ, ಪರಿಸರ ನಾಶಕ್ಕೆ ಎಡೆಮಾಡಿಕೊಡುವ ಈ ಯೋಜನೆಯನ್ನು ನಾವು ವಿರೋದಿಸುವುದು ಅನಿವಾರ್ಯವಾಗಿದೆ.

ಬನ್ನಿ ನಮಗೆ ಅಗತ್ಯವಿಲ್ಲದ ,ಉತ್ತರ ಕನ್ನಡ ಜಿಲ್ಲೆಗೆ ಅಪಾಯಕಾರಿ ಆಗಿರುವ ಈ ಯೋಜನೆಯನ್ನು ಸಂಘಟಿತರಾಗಿ ವಿರೋಧಿಸೋಣ.

ಪರಿಸರ ಸಂರಕ್ಷಣಾ ಕೇಂದ್ರ

ಬಸವರಾಜ ನಿಲಯ

ಚೌಕಿಮಠ, ಶಿರಸಿ ( ಉ.ಕ.)

ದೂರವಾಣಿ: 425139

## ಅಂಕೋಲಾ ಹುಬ್ಬಳ್ಳಿ ರೈಲು ಮಾರ್ಗ ಬೇಕೆ?

ಅಂಕೋಲಾ ಹುಬ್ಬಳ್ಳಿ ರೈಲು ಮಾರ್ಗ ನಿರ್ಮಾಣದ ಕೆಲಸ ಪ್ರಾರಂಭಿಕ ಹಂತದಲ್ಲಿದೆ. ಈ ಯೋಜನೆ ಉತ್ತರ ಕನ್ನಡ ಜಿಲ್ಲೆಗೆ ವರದಾನವಾಗಲಿದೆಯೆಂದು ರಾಜಕಾರಣಿಗಳು ಹೇಳುತ್ತಿದ್ದಾರೆ. ಇದರಿಂದ ಇನ್ನೂ ಹೆಚ್ಚಿನ ಅಭಿವೃದ್ಧಿ ಆಗಲಿದೆ. ಜನರಿಗೆ ಉದ್ಯೋಗ ಅವಕಾಶ ಹಾಗೂ ಬೃಹತ್ ಉದ್ದಿಮೆಗಳ ಸ್ಥಾಪನೆಗೆ ಈ ರೈಲು ಮಾರ್ಗ ಅವಶ್ಯಕ ಎಂದು ಹೇಳಲಾಗುತ್ತಿದೆ.

### ಈ ರೈಲು ಮಾರ್ಗ ನಿರ್ಮಾಣದ ನಿಜವಾದ ಉದ್ದೇಶ?

- ಬಳ್ಳಾರಿಯ ಹೊಸಪೇಟೆಯಲ್ಲಿ ಉತ್ಪಾದಿಸಲಾಗುವ ಕಬ್ಬಿಣದ ಅದಿರನ್ನು ರಫ್ತಿಗಾಗಿ ಗೋವಾ ಬಂದರಿಗೆ ತಲುಪಿಸಲು ಆ ಮೂಲಕ ಹೆಚ್ಚಿರುವ ಅದಿರಿನ ಬೇಡಿಕೆಯನ್ನು ಪೂರೈಸುವುದು.
- ಮುಂದೆ ವಿದೇಶಿ ವ್ಯಾಪರಕ್ಕೆ ತೆರೆದುಕೊಳ್ಳಲಿರುವ ಕಾರವಾರ ಬಂದರಿಗೆ ಸಂಪರ್ಕ ಕಲ್ಪಿಸಲು.

### *ಮಾರ್ಗ ಎಲ್ಲಿಂದ ಎಲ್ಲಿಗೆ?*

- ಹುಬ್ಬಳ್ಳಿಯಿಂದ ಪ್ರಾರಂಭವಾಗಿ ಯಲ್ಲಾಪುರ – ಸುಂಕಸಾಲ್ ಮೂಲಕ ಅಂಕೋಲಾದಲ್ಲಿ ಕೊಂಕಣ ರೈಲು ಮಾರ್ಗಕ್ಕೆ ಜೋಡಣೆ.

*ಮಾರ್ಗದ ಉದ್ದ?*

- ಈ ರೈಲು ಮಾರ್ಗದ ಉದ್ದ ಹುಬ್ಬಳ್ಳಿಯಿಂದ ಅಂಕೋಲಾದವರೆಗೆ 164 ಕಿ.ಮೀ.ಗಳು.

1100

- *ರೈಲು ಮಾರ್ಗದ ನಿರ್ಮಾಣ ವೆಚ್ಚ?* ~~483.15~~ ಕೋಟಿ ರೂ.ಗಳು

*ರೈಲು ಮಾರ್ಗ ನಿರ್ಮಾಣಕ್ಕೆ ಅವಶ್ಯಕವಾದ ಭೂ ಪ್ರದೇಶದ ಪ್ರಮಾಣ*

- ಮಾರ್ಗದ ಎರಡೂ ಕಡೆಗಳಲ್ಲಿ 10 ಮೀಟರ್‌ವರೆಗಿನ ಪ್ರದೇಶ 164 ಕಿ.ಮೀ.ಗಳವರೆಗೆ.
- ಅವಶ್ಯಕವಿರುವ ಒಟ್ಟೂ ಭೂಪ್ರದೇಶ 1186 ಹೆಕ್ಟೇರಗಳು.(2800 ಎಕರೆ)

  ಅದರಲ್ಲಿ

  - ಅರಣ್ಯ ಪ್ರದೇಶ 900 ಹೆಕ್ಟೇರಗಳು.
  - ನೀರಾವರಿ ಪ್ರದೇಶ 38 ಹೆಕ್ಟೆರಗಳು
  - ಒಣ ಬೂಮಿ 235 ಹೆಕ್ಟೆರಗಳು
  - ಅಡಿಕೆ ತೋಟ 13 ಹೆಕ್ಟೆರಗಳು

*ಅಂಕೋಲಾ - ಹುಬ್ಬಳ್ಳಿ ರೈಲು ಮಾರ್ಗ ನಿರ್ಮಾಣದಿಂದ ಉಂಟಾಗುವ ಸಮಸ್ಯಗಳು:*

- ಈ ರೈಲು ಮಾರ್ಗದ ಇಕ್ಕೆಲಗಳಲ್ಲಿ ವಾಸಿಸುವ ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಯ ಜನರು ತೊಂದರೆಗೀಡಾಗುತ್ತಾರೆ. ಮಿಶ್ರಿಕೈ, ರಾಮನಗುಳಿ, ತಂಬುರ್,ಕೈಗಾಡಿ, ಕಿರವತ್ತಿ, ರಾಮನಕೊಪ್ಪ, ಇಡಗುಂದಿ, ಬಿರಗದ್ದೆ, ಕಂಚಿನಹಾಳೆ, ಕೊಡ್ಲಗದ್ದೆ, ವಜ್ರಳ್ಳಿ, ಹೆಬ್ಬೂಲು, ಹೊನ್ನಳ್ಳಿ, ಅಗಸೂರು ನಂದಿಗದ್ದೆ ಮುಂತಾದ

ಹಳ್ಳಿಗಳ ಜನರು ತಮ್ಮ ಮನೆ ,ಮಠ, ವ್ಯವಸಾಯ ಭೂಮಿಗಳನ್ನು ಕಳೆದುಕೊಳ್ಳಲಿದ್ದಾರೆ.

- ಅಂಕೋಲಾ ಮತ್ತು ಯಲ್ಲಾಪುರ ಭಾಗದ ಫಲವತ್ತಾದ ಪ್ರದೇಶಗಳು ರೈತರ ಕೈ ಬಿಟ್ಟುಹೋಗಲಿವೆ.
- ಬಹುಸಂಖ್ಯೆಯ ಅತಿಕ್ರಮಣದಾರರು ಭೂದಾಖಲೆಗಳಿಲ್ಲದೆ ಪರಿಹಾರವನ್ನೂ ಪಡೆಯಲಾರರು.
- ರೈಲು ಮಾರ್ಗ ನಿರ್ಮಾಣದ ನಂತರ ಉಳಿದಿರುವ ಕಾಡಿನ ನಾಶ, ಮರಗಳ್ಳತನ ಹೆಚ್ಚಾಗುವುದು ಖಚಿತ. ಹಾಗೆಯೇ ರೈಲು ಮಾರ್ಗದ ಪಕ್ಕದಲ್ಲಿ ವಾಸಿಸುವ ಜನರ ಜೀವನದಲ್ಲಿ ಹಲವಾರು ರೀತಿಯ ಹೊಸ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ.

*ಅರಣ್ಯ ನಾಶ:*

- ಈ ರೈಲು ಮಾರ್ಗ ನಿರ್ಮಾಣದಿಂದ ಹೆಚ್ಚು ಹಾನಿಯಾಗುವುದು ಆರಣ್ಯ ಭೂಮಿಗೆ.
- ಯೋಜನೆಗೆ ಬಳಸುವ ಭೂಭಾಗದ ಶೇ.75 ರಷ್ಟು ಭಾಗ ಸಂಪದ್ಭರಿತ ಆರಣ್ಯಗಳಿಂದ ಕೂಡಿದೆ.
- ರೈಲುಮಾರ್ಗದ ನಿರ್ಮಾಣ ಉದ್ದಿಮೆಗಳ ಆಗಮನಕ್ಕೆ ರಹದಾರಿಯಾಗಿ ಅದು ಪರಿಸರ ಮಾಲಿನ್ಯ ಮತ್ತು ಅರಣ್ಯ ನಾಶಕ್ಕೆ ಕಾರಣವಾಗಬಲ್ಲುದು.
- ಮಾರ್ಗ ನಿರ್ಮಾಣದಿಂದ ನಿರಾಶ್ರಿತರಾದವರಿಗೆ ಪುನರ್ ವಸತಿ ನಿರ್ಮಿಸಲು ಮತ್ತಷ್ಟು ಕಾಡು ನಾಶವಾಗಲಿದೆ.
- ಜಿಲ್ಲೆಯ ಜನರಿಗೆ ಉದ್ಯೋಗಾವಕಾಶ ದೊರೆಯುಬಹುದೆಂಬುದನ್ನು ಈ ಹಿಂದೆ ಬಂದ ಯೋಜನೆಗಳು ಸುಳ್ಳಾಗಿಸಿವೆ.

ಗಮನಿಸಬೇಕಾದ ಅಂಶಗಳು:

- ಕೇಂದ್ರ ಪರಿಸರ ಇಲಾಖೆಯು ಈ ಯೋಜನೆಗೆ ಅನುಮತಿ ನೀಡಿಲ್ಲ.
- ಹುಬ್ಬಳ್ಳಿಯ ಹತ್ತಿರ ಕೆಲಸ ಪ್ರಾರಂಭವಾಗಿದ್ದರೂ ಕೃಷಿ ಭೂಮಿ ಕಳೆದುಕೊಂಡವರಿಗೆ ಪರಿಹಾರ ನೀಡಿಲ್ಲ.

ಈ ಯೋಜನೆಯಿಂದ ಉಂಟಾಗುವ ಸಮಸ್ಯೆಗಳ ಅರಿವಿದ್ದೂ ಯೋಜನೆ ಜಾರಿಯಾಗಬೇಕೆಂಬ ಹಠ ನಮ್ಮ ರಾಜಕೀಯ ನೇತಾರರದ್ದು.

ದೇಶದ ಕಾನೂನಿಗೆ ವಿರುದ್ಧವಾದ, ಪರಿಸರ ನಾಶಕ್ಕೆ ಕಾರಣವಾಗುವ, ಜನಜೀವನದ ಮೇಲೆ ದುಷ್ಪರಿಣಾಮ ಬೀರುವ ಈ ರೈಲು ಮಾರ್ಗ ನಿರ್ಮಾಣ ಯೋಜನೆ ಬೇಕೆ?

ಪರಿಸರ ಸಂರಕ್ಷಣಾ ಕೇಂದ್ರ,

ಬಸವರಾಜ ನಿಲಯ ಚೌಕಿಮಠ,ಶಿರಸಿ(ಉತ್ತರ ಕನ್ನಡ)- 581401

ದೂರವಾಣಿ:425139

## ಅಂಕೋಲಾ ಹುಬ್ಬಳ್ಳಿ ರೈಲು ಮಾರ್ಗ ಬೇಕೆ?

ಅಂಕೋಲಾ ಹುಬ್ಬಳ್ಳಿ ರೈಲು ಮಾರ್ಗ ನಿರ್ಮಾಣದ ಕೆಲಸ ಪ್ರಾರಂಭಿಕ ಹಂತದಲ್ಲಿದೆ. ಈ ಯೋಜನೆ ಉತ್ತರ ಕನ್ನಡ ಜಿಲ್ಲೆಗೆ ವರದಾನವಾಗಲಿದೆಯೆಂದು ರಾಜಕಾರಣಿಗಳು ಹೇಳುತ್ತಿದ್ದಾರೆ. ಇದರಿಂದ ಇನ್ನೂ ಹೆಚ್ಚಿನ ಅಭಿವೃದ್ಧಿ ಆಗಲಿದೆ. ಜನರಿಗೆ ಉದ್ಯೋಗ ಅವಕಾಶ ಹಾಗೂ ಬೃಹತ್ ಉದ್ದಿಮೆಗಳ ಸ್ಥಾಪನೆಗೆ ಈ ರೈಲು ಮಾರ್ಗ ಅವಶ್ಯಕ ಎಂದು ಹೇಳಲಾಗುತ್ತಿದೆ.

ಈ ರೈಲು ಮಾರ್ಗ ನಿರ್ಮಾಣದ ನಿಜವಾದ ಉದ್ದೇಶ?

- ಬಳ್ಳಾರಿಯ ಹೊಸಪೇಟೆಯಲ್ಲಿ ಉತ್ಪಾದಿಸಲಾಗುವ ಕಬ್ಬಿಣದ ಅದಿರನ್ನು ರಫ್ತಿಗಾಗಿ ಗೋವಾ ಬಂದರಿಗೆ ತಲುಪಿಸಲು ಆ ಮೂಲಕ ಹೆಚ್ಚಿರುವ ಅದಿರಿನ ಬೇಡಿಕೆಯನ್ನು ಪೊರೈಸುವುದು.
- ಮುಂದೆ ವಿದೇಶಿ ವ್ಯಾಪರಕ್ಕೆ ತೆರೆದುಕೊಳ್ಳಲಿರುವ ಕಾರವಾರ ಬಂದರಿಗೆ ಸಂಪರ್ಕ ಕಲ್ಪಿಸಲು.

*ಮಾರ್ಗ ಎಲ್ಲಿಂದ ಎಲ್ಲಿಗೆ?*

- ಹುಬ್ಬಳ್ಳಿಯಿಂದ ಪ್ರಾರಂಭವಾಗಿ ಯಲ್ಲಾಪುರ – ಸುಂಕಸಾಲ್ ಮೂಲಕ ಅಂಕೋಲಾದಲ್ಲಿ ಕೊಂಕಣ ರೈಲು ಮಾರ್ಗಕ್ಕೆ ಜೋಡಣೆ.

*ಮಾರ್ಗದ ಉದ್ದ?*

- ಈ ರೈಲು ಮಾರ್ಗದ ಉದ್ದ ಹುಬ್ಬಳ್ಳಿಯಿಂದ ಅಂಕೋಲಾದವರೆಗೆ 164 ಕಿ.ಮೀ.ಗಳು.
- *ರೈಲು ಮಾರ್ಗದ ನಿರ್ಮಾಣ ವೆಚ್ಚ?* ~~483.15~~ 1100 ಕೋಟಿ ರೂ.ಗಳು

*ರೈಲು ಮಾರ್ಗ ನಿರ್ಮಾಣಕ್ಕೆ ಅವಶ್ಯಕವಾದ ಭೂ ಪ್ರದೇಶದ ಪ್ರಮಾಣ*

- ಮಾರ್ಗದ ಎರಡೂ ಕಡೆಗಳಲ್ಲಿ 10 ಮೀಟರ್‌ವರೆಗಿನ ಪ್ರದೇಶ 164 ಕಿ.ಮೀ.ಗಳವರೆಗೆ.
- ಅವಶ್ಯಕವಿರುವ ಒಟ್ಟೂ ಭೂಪ್ರದೇಶ 1186 ಹೆಕ್ಟೇರಗಳು.(2800 ಎಕರೆ)
  ಅದರಲ್ಲಿ
  - ಅರಣ್ಯ ಪ್ರದೇಶ 900 ಹೆಕ್ಟೇರಗಳು.
  - ನೀರಾವರಿ ಪ್ರದೇಶ 38 ಹೆಕ್ಟೆರಗಳು
  - ಒಣ ಬೂಮಿ 235 ಹೆಕ್ಟೆರಗಳು
  - ಅಡಿಕೆ ತೋಟ 13 ಹೆಕ್ಟೆರಗಳು

*ಅಂಕೋಲಾ - ಹುಬ್ಬಳ್ಳಿ ರೈಲು ಮಾರ್ಗ ನಿರ್ಮಾಣದಿಂದ ಉಂಟಾಗುವ ಸಮಸ್ಯೆಗಳು:*

- ಈ ರೈಲು ಮಾರ್ಗದ ಇಕ್ಕೆಲಗಳಲ್ಲಿ ವಾಸಿಸುವ ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಯ ಜನರು ತೊಂದರೆಗೀಡಾಗುತ್ತಾರೆ. ಮಿಶ್ರಿಕೈ, ರಾಮನಗುಳಿ, ತಂಬುರ್,ಕೈಗಾಡಿ, ಕಿರವತ್ತಿ, ರಾಮನಕೊಪ್ಪ, ಇಡಗುಂದಿ, ಬಿರಗದ್ದೆ, ಕಂಚಿನಹಾಳೆ, ಕೊಡ್ಲಗದ್ದೆ, ವಜ್ರಳ್ಳಿ, ಹೆಬ್ಬೂಲು,

ಹೊನ್ನಳ್ಳಿ, ಅಗಸೂರು ನಂದಿಗದ್ದೆ ಮುಂತಾದ ಹಳ್ಳಿಗಳ ಜನರು ತಮ್ಮ ಮನೆ ,ಮಠ, ವ್ಯವಸಾಯ ಭೂಮಿಗಳನ್ನು ಕಳೆದುಕೊಳ್ಳಲಿದ್ದಾರೆ.

- ಅಂಕೋಲಾ ಮತ್ತು ಯಲ್ಲಾಪುರ ಭಾಗದ ಫಲವತ್ತಾದ ಪ್ರದೇಶಗಳು ರೈತರ ಕೈ ಬಿಟ್ಟುಹೋಗಲಿವೆ.
- ಬಹುಸಂಖ್ಯೆಯ ಅತಿಕ್ರಮಣದಾರರು ಭೂದಾಖಲೆಗಳಿಲ್ಲದೆ ಪರಿಹಾರವನ್ನೂ ಪಡೆಯಲಾರರು.
- ರೈಲು ಮಾರ್ಗ ನಿರ್ಮಾಣದ ನಂತರ ಉಳಿದಿರುವ ಕಾಡಿನ ನಾಶ, ಮರಗಳ್ಳತನ ಹೆಚ್ಚಾಗುವುದು ಖಚಿತ. ಹಾಗೆಯೇ ರೈಲು ಮಾರ್ಗದ ಪಕ್ಕದಲ್ಲಿ ವಾಸಿಸುವ ಜನರ ಜೀವನದಲ್ಲಿ ಹಲವಾರು ರೀತಿಯ ಹೊಸ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ.

*ಅರಣ್ಯ ನಾಶ*

- ಈ ರೈಲು ಮಾರ್ಗ ನಿರ್ಮಾಣದಿಂದ ಹೆಚ್ಚು ಹಾನಿಯಾಗುವುದು ಆರಣ್ಯ ಭೂಮಿಗೆ.
- ಯೋಜನೆಗೆ ಬಳಸುವ ಭೂಭಾಗದ ಶೇ.75 ರಷ್ಟು ಭಾಗ ಸಂಪದ್ಭರಿತ ಆರಣ್ಯಗಳಿಂದ ಕೂಡಿದೆ.
- ರೈಲುಮಾರ್ಗದ ನಿರ್ಮಾಣ ಉದ್ದಿಮೆಗಳ ಆಗಮನಕ್ಕೆ ರಹದಾರಿಯಾಗಿ ಆದು ಪರಿಸರ ಮಾಲಿನ್ಯ ಮತ್ತು ಅರಣ್ಯ ನಾಶಕ್ಕೆ ಕಾರಣವಾಗಬಲ್ಲುದು.
- ಮಾರ್ಗ ನಿರ್ಮಾಣದಿಂದ ನಿರಾಶ್ರಿತರಾದವರಿಗೆ ಪುನರ್ ವಸತಿ ನಿರ್ಮಿಸಲು ಮತ್ತಷ್ಟು ಕಾಡು ನಾಶವಾಗಲಿದೆ.
- ಜಿಲ್ಲೆಯ ಜನರಿಗೆ ಉದ್ಯೋಗಾವಕಾಶ ದೊರೆಯಬಹುದೆಂಬುದನ್ನು ಈ ಹಿಂದೆ ಬಂದ ಯೋಜನೆಗಳು ಸುಳ್ಳಾಗಿಸಿವೆ.

*ಗಮನಿಸಬೇಕಾದ ಅಂಶಗಳು:*

- ಕೇಂದ್ರ ಪರಿಸರ ಇಲಾಖೆಯು ಈ ಯೋಜನೆಗೆ ಅನುಮತಿ ನೀಡಿಲ್ಲ.
- ಹುಬ್ಬಳ್ಳಿಯ ಹತ್ತಿರ ಕೆಲಸ ಪ್ರಾರಂಭವಾಗಿದ್ದರೂ ಕೃಷಿ ಭೂಮಿ ಕಳೆದುಕೊಂಡವರಿಗೆ ಪರಿಹಾರ ನೀಡಿಲ್ಲ.

ಈ ಯೋಜನೆಯಿಂದ ಉಂಟಾಗುವ ಸಮಸ್ಯಗಳ ಅರಿವಿದ್ದೂ ಯೋಜನೆ ಜಾರಿಯಾಗಬೇಕೆಂಬ ಹಠ ನಮ್ಮ ರಾಜಕೀಯ ನೇತಾರರದ್ದು.
ದೇಶದ ಕಾನೂನಿಗೆ ವಿರುದ್ಧವಾದ, ಪರಿಸರ ನಾಶಕ್ಕೆ ಕಾರಣವಾಗುವ, ಜನಜೀವನದ ಮೇಲೆ ದುಷ್ಪರಿಣಾಮ ಬೀರುವ ಈ ರೈಲು ಮಾರ್ಗ ನಿರ್ಮಾಣ ಯೋಜನೆ ಬೇಕೆ?
ಬನ್ನಿ, ನಾವೆಲ್ಲ ಸೇರಿ ಈ ಯೋಜನೆಯ ಸಾಧಕ ಬಾಧಕಗಳನ್ನು ಚರ್ಚಿಸಿ ನಮ್ಮ ಪರಿಸರ ಮತ್ತು ಅಳಿದುಳಿದ ಅರಣ್ಯ ಸಂಪತ್ತನ್ನು ಉಳಿಸಿಕೊಳ್ಳುವ ಬಗ್ಗೆ ಚರ್ಚೆ ಮಾಡಲು ವಿಚಾರಗೋಷ್ಠಿಯೊಂದನ್ನು ಏರ್ಪಡಿಸಲಾಗಿದೆ.

ದಿನಾಂಕ: 8-9-2003
ಸ್ಥಳ: ತೇಲಂಗಾರ ( ಯಲ್ಲಾಪುರ-ವಜ್ರಳ್ಳಿ ರಸ್ತೆಯಲ್ಲಿ)
ಸಮಯ: ಮದ್ಯಾಹ್ನ 3.30.
ಸಂಯೋಜನೆ: ಕಲಾ ಬಳಗ, ತೇಲಂಗಾರ ಹಾಗೂ ಪರಿಸರ ಸಂರಕ್ಷಣಾ ಕೇಂದ್ರ, ಶಿರಸಿ

ಸಂಪರ್ಕ:
ಪರಿಸರ ಸಂರಕ್ಷಣಾ ಕೇಂದ್ರ,
ಬಸವರಾಜ ನಿಲಯ ಚೌಕಿಮಠ,ಶಿರಸಿ(ಉತ್ತರ ಕನ್ನಡ)- 581401
ದೂರವಾಣಿ:425139

ಕಲಾ ಬಳಗ
ತೇಲಂಗಾರ
ಯಲ್ಲಾಪುರ
ದೂರವಾಣಿ:

## SOUTH WESTERN RAILWAY

**Construction of New BG Railway Line between Hubli – Ankola**

SATEMENT SHOWING THE FOREST LAND REQUIREMENT IN YELLAPUR TALUK

**(In the jurisdiction of Dy. Conservator of Forests, Yellapur)**

| S.No | Name of Village | Survey Nos. | Total Area | | Area Reqd | | Remarks |
|---|---|---|---|---|---|---|---|
| | | | Ac. | Gt. | Ac. | Gt. | |
| 1 | HOSALLI | 17A | 1951 | 09 | 45 | 10 | |
| 2 | KIRVATTI | 6 | 7 | 34 | 0 | 01 | |
| | | 7 | 7 | 07 | 0 | 29 | |
| | | 18.A1.A1.A | 2391 | 25 | 131 | 37 | |
| | | 19 | 2 | 21 | 0 | 02 | |
| | | 21 | 4 | 23 | 1 | 11 | |
| 3 | KOLIKERE | 15A | 320 | 39 | 5 | 00 | |
| | | 19A /1/ A | 378 | 17 | 11 | 32 | |
| 4 | KANNADAGALLU | 122.A1.A1.A1.A | 2475 | 15 | 68 | 01 | |
| | | | | | | | |
| 5 | SAHASRAHALLI | 1.A1.A/1 | 3896 | 20 | 54 | 01 | |
| | | 103.A | 235 | 04 | 29 | 33 | |
| 6 | KONDEMANE | 3 | 270 | 18 | 14 | 01 | |
| 7 | YELLAPUR | 68.A1A1A1A1A1A1A1 | 543 | 22 | 6 | 15 | |
| | | 58.A1.A | 376 | 14 | 9 | 20 | |
| 8 | SABGERI | 26.A1.A1.A | 210 | 11 | 30 | 25 | |
| | | 4.A | 34 | 11 | 6 | 25 | |
| 9 | CHANDGULI | 194.A1 | 230 | 20 | 2 | 02 | |
| 10 | HITTALAKARGADDE | 53.A1 | 329 | 12 | 3 | 16 | |
| | | 76A | 9 | 20 | 0 | 16 | |
| | | 81 | 11 | 10 | 4 | 01 | |
| | | 108.A | 119 | 27 | 0 | 13 | |
| 11 | KOUDIKERE | 44 | 310 | 10 | 3 | 00 | |
| | | 21 | 35 | 30 | 3 | 21 | |
| 12 | NANDOLLI | 108 | 215 | 29 | 8 | 23 | |
| | | 96.A1 | 142 | 13 | 2 | 00 | |
| | | 8 | 4 | 14 | 0 | 01 | |
| | | 9 | 1 | 30 | 0 | 26 | |
| | | 84.B1.B | 4 | 03 | 14 | 38 | |
| | | 108.B1 | 14 | 23 | 7 | 21 | |
| 13 | BALEKANE | 53.A | 670 | 16 | 38 | 20 | |
| | | 47 | 7 | 21 | 2 | 07 | |
| | | 48 | 5 | 39 | 1 | 08 | |
| | | 50 | 4 | 08 | 2 | 09 | |
| 14 | JOGADAMANE | 13 | 241 | 35 | 28 | 36 | |
| 15 | KOMUDHI | 25 | 665 | 36 | 38 | 04 | |
| | | 36 | 6 | 13 | 2 | 23 | |
| | | 37 | 11 | 26 | 5 | 27 | |
| 16 | IDUGUNDI | 31.A1 | 152 | 03 | 1 | 36 | |
| 17 | ARABAIL | 72 | 541 | 28 | 38 | 13 | |
| | | 76 | 497 | 38 | 32 | 30 | |
| | | 78 | 618 | 37 | 51 | 22 | |
| | | 79 | 464 | 34 | 35 | 38 | |
| | | 82.A | 571 | 30 | 10 | 25 | |
| | | 93 | 523 | 15 | 18 | 30 | |
| | | 94.A | | 11 | 51 | 11 | |
| 18 | TELENGERI | 12 | | [illegible] | 32 | 10 | |
| | | 55 | | | 0 | 12 | |
| | | 11.B.14 | | | 4 | 16 | |
| | | 115 | | | 0 | 34 | |
| | | 116 | | | 2 | 36 | |
| | | 117 | | 34 | 0 | 01 | |

(19)

| | Name of Village | Survey Nos. | Total Area | | Area Reqd | | Remarks |
|---|---|---|---|---|---|---|---|
| | | | Ac. | Gt. | Ac. | Gt. | |
| 19 | VAZRAHALLI | 8.A1.A | 787 | 37 | 13 | 25 | |
| | | 75 | 4 | 33 | 2 | 06 | |
| 20 | HONAGADDE | 7 | 196 | 08 | 2 | 11 | |
| | | 23.A | 327 | 10 | 20 | 06 | |
| 21 | AMBAGAON | 24.A | 385 | 06 | 22 | 32 | |
| | | 25.A1 | 775 | 22 | 39 | 06 | |
| | | 26 | 815 | 29 | 122 | 02 | |
| | | 18 | 1 | 32 | 0 | 03 | |
| 22 | GULLAPURA | 1 | 542 | 15 | 27 | 11 | |
| | | 2 | 243 | 20 | 6 | 03 | |
| 23 | KODLAGADDE | 19.A | 297 | 03 | 41 | 18 | |
| | | 29 | 25 | 01 | 1 | 07 | |
| | | 30 | 15 | 36 | 2 | 33 | |
| | | 31 | 31 | 05 | 3 | 39 | |
| 24 | KALACHI | 7 | 371 | 06 | 8 | 12 | |
| 25 | MAVINAMANE | 132 | 570 | 10 | 15 | 09 | |
| | | 447 | 1128 | 17 | 38 | 10 | |
| | | 562 | 533 | 10 | 71 | 15 | |
| | | TOTAL | | | 1304 | 37 | |

528.31 Hectares

S. BALAKRISHNA
Chief Engineer (Central),
Construction, S.W.Railway,
Bangalore Cantonment.

Deputy Conservator of Forests,
Yellapur Division, YELLAPUR.

# ಹುಬ್ಬಳ್ಳಿ– ಅಂಕೋಲಾ ರೈಲ್ವೆ ಮಾರ್ಗ ನಿರ್ಮಾಣ

## ಸಾಧಕ – ಬಾದಕಗಳು

ಬಳ್ಳಾರಿ ಬಳಿಯ ಹೋಸಪೇಟೆಯಿಂದ ಕಬ್ಬಿಣದ ಅದಿರನ್ನು ಗೋವಾ ಬಂದರಿಗೆ ಸಾಗಿಸುವ ಪ್ರಮಾಣವನ್ನು ಹೆಚ್ಚಿಸಲು ಈಗಿರುವ ಸಂಪರ್ಕ ಮಾರ್ಗ ಬದಲಾಗಿ ಹೊಸ ರೈಲು ಮಾರ್ಗದ ಅವಶ್ಯಕತೆ ಕಂಡು ಬಂದದ್ದರಿಂದ ಹುಬ್ಬಳ್ಳಿ – ಅಂಕೋಲಾ ರೈಲು ಮಾರ್ಗ ನಿರ್ಮಾಣದ ಯೋಜನೆಯನ್ನು ರೂಪಿಸಲಾಗಿದೆ.

ಈ ರೈಲು ಮಾರ್ಗ ಹುಬ್ಬಳ್ಳಿಯಿಂದ ಪ್ರಾರಂಭವಾಗಿ ಯಲ್ಲಾಪುರ – ಸುಂಕಸಾಲ್ ಮೂಲಕ ಅಂಕೋಲಾದಲ್ಲಿ ಕೊಂಕಣ ರೈಲು ಮಾರ್ಗಕ್ಕೆ ಜೋಡಿಸಲ್ಪಡುತ್ತದೆ. ಹುಬ್ಬಳ್ಳಿಯಿಂದ ಅಂಕೋಲಾದ ವರೆಗಿನ 164 ಕಿ.ಮಿ. ಉದ್ದದ ಈ ರೈಲು ಮಾರ್ಗದ ನಿರ್ಮಾಣ ವೆಚ್ಚ 997.5 ಕೋಟಿ ರೂಪಾಯಿಗಳು (ಈಗ 1100ಕ್ಕೆ ಏರಿದೆ) 1350 ಹೆಕ್ಟೆರ್ ಭೂಮಿ ಬಳಕೆ. ಇದರಲ್ಲಿ 850 ಹೆಕ್ಟೇರ್ ಅರಣ್ಯ ಭೂಮಿ, 420 ಹೆಕ್ಟೆರ್ ಕೃಷಿ ಭೂಮಿ ಈ ರೈಲು ಮಾರ್ಗ ನಿರ್ಮಾಣ ಯೋಜನೆಗೆ ಬಳಕೆಯಾಗಲಿದೆ.

ಈ ರೈಲುಮಾರ್ಗ ನಿರ್ಮಾಣದಿಂದ ಮಿಶ್ರಿಕ್ಕೆ, ರಾಮನಗುಳಿ, ತಂಬುರ್,ಕೈಗಾಡಿ, ಕಿರವತ್ತಿ, ರಾಮನಕೊಪ್ಪ, ಇಡಗುಂದಿ, ಬಿರಗದ್ದೆ, ಕಂಚಿನಹಾಳೆ, ಕೊಡ್ಲಗದ್ದೆ, ವಜ್ರಳ್ಳಿ, ಹೆಬ್ಬೂಲು, ಹೊನ್ನಳ್ಳಿ, ಅಗಸೂರು ನಂದಿಗದ್ದೆ ಮುಂತಾದ ಹಳ್ಳಿಗಳ ಜನರು ತಮ್ಮ ಮನೆ, ಮಠ, ವ್ಯವಸಾಯ ಭೂಮಿಗಳನ್ನು ಕಳೆದುಕೊಳ್ಳಲಿದ್ದಾರೆ.

ಪರಿಸರ ಸಂರಕ್ಷಣಾ ಕೇಂದ್ರವು ಈ ಯೋಜನೆಯಿಂದ ಉಂಟಾಗಬಹುದಾದ ಸಾಧಕ ಭಾದಕಗಳ ಕುರಿತು ಜನರೊಂದಿಗೆ ಚರ್ಚಿಸಿ ಅವರಿಗೆ ಯೋಜನೆಯ ಕುರಿತು ಅರಿವು ಮೂಡಿಸಲು ದಿನಾಂಕ 8/9/2003 ರಂದು ಯಲ್ಲಾಪುರ ತಾಲೂಕಿನ ತೇಲಂಗಾರ ಗ್ರಾಮದಲ್ಲಿ ವಿಚಾರಗೋಷ್ಠಿಯೊಂದನ್ನು ಏರ್ಪಡಿಸಿತ್ತು. ವಿಚಾರಗೋಷ್ಠಿ ಪ್ರಾರಂಭವಾಗುವ ಮೊದಲು ಪರಿಸರ ಸಂರಕ್ಷಣಾ ಕೇಂದ್ರದ ತಂಡವು ಸಮೀಪದಲ್ಲಿಯೇ ಇದ್ದ ಈ ರೈಲು ಮಾರ್ಗ ನಿಮಾಣದಿಂದ ತೊಂದರೆಗೊಳಗಾಗುವ ಪ್ರದೇಶಕ್ಕೆ ಭೇಟಿ ನೀಡಿತು. ಇಲ್ಲಿ ಗಣಪತಿ ನಾರಾಯಣ ಗಾಂವಕರ ಎನ್ನುವ ರೈತರ ಜಮಿನಿನ ಮಧ್ಯದಲ್ಲಿ ರೈಲು ಮಾರ್ಗವು ಹಾದು ಹೋಗುತ್ತದೆ. ಸರ್ವೆ ನಂ. 51, 52 ರಲ್ಲಿರುವ ಇವರ ಜಮೀನಿನ ಮೂಲಕ ಹಾದು ಹೋಗುವ ಮಾರ್ಗದಿಂದಾಗಿ ಈ ರೈತರ 1 ಎಕರೆ 10 ಗುಂಟೆ ಭೂಮಿ ಕೈ ಬಿಟ್ಟು ಹೋಗುತ್ತದೆ. ಇದರಲ್ಲಿ ಫಲ ಕೊಡುತ್ತಿರುವ ಅಡಿಕೆ ತೋಟವೂ ಸೇರಿದೆ. ಎರಡು ಗುಡ್ಡಗಳ ಮಧ್ಯದಲ್ಲಿರುವ ಇವರ ತೋಟದ ಮೇಲೆ ರೈಲು ಮಾರ್ಗ ಹಾದು ಹೋಗುತ್ತದೆ. ತೋಟಕ್ಕೆ ಹೊಂದಿಕೊಂಡಿರುವ ಬೆಟ್ಟದಲ್ಲಿ ಮಾರ್ಗ ನಿರ್ಮಾಣಕ್ಕಾಗಿ ಗುರುತಿಗೆ ನಿಲ್ಲಿಸಲಾದ ಕಲ್ಲುಗಳು ಕಂಡುಬಂದವು. ಪರಿಸರ ಸಂರಕ್ಷಣಾ ಕೇಂದ್ರದ ತಂಡದೊಂದಿಗೆ ಮಾತನಾಡಿದ ಗಣಪತಿ ಗಾಂವಕರ ಅವರು ರೈಲು ಮಾರ್ಗಕ್ಕಾಗಿ ಸರ್ವೆ ಮಾಡಲು ಬಂದಾಗ ನಮಗೆ ಅವರು ಬಂದಿದ್ದು ಏಕೆಂದು ತಿಳಿದಿರಲಿಲ್ಲ. ಆದರೆ ನಮಗೆ ವಿಷಯ ತಿಳಿಯುವಾಗ ಸರ್ವೆ ಕಾರ್ಯ ಮುಗಿದಿತ್ತು. ತಮ್ಮ ತೊಟದ ಮಧ್ಯದಲ್ಲಿಯೇ ಮಾರ್ಗ ಹಾದು ಹೋಗವುದೆಂದು ತಿಳಿದು ಬಂದಿತು. ಹುಬ್ಬಳ್ಳಿಯಿಂದ ಮಾರ್ಗ ನಿರ್ಮಾಣ ಪ್ರಾರಂಭವಾಗಿದೆಯೆಂಬ ವಿಷಯ ತಿಳಿದು ಅಲ್ಲಿಗೆ ಭೇಟಿ ನೀಡಿ ಪರಿಶೀಲಿಸಿದಾಗ ಮಾರ್ಗ ನಿರ್ಮಾಣ ಆರಂಭವಾಗಿದ್ದರೂ ಜಮೀನು ಕಳೆದುಕೊಂಡ ರೈತರಿಗೆ ಇನ್ನೂ ಪರಿಹಾರ ಸಿಕ್ಕಿರಲಿಲ್ಲ. ಕಲಘಟಗಿಯವರೆಗೂ ಮಾರ್ಗ ನಿರ್ಮಾಣದ ಕೆಲಸ ಪ್ರಗತಿಯಲ್ಲಿದ್ದರೂ, ರೈತರನ್ನು ವಿಚಾರಿಸಲಾಗಿ ಪರಿಹಾರ ಸಿಗದ ವಿಷಯ ತಿಳಿದು ಬಂದಿತು. ಈ ವಿಷಯದಿಂದ ಆತಂಕಿತರಾಗಿದ್ದ ಗಣಪತಿ ಗಾಂವಕರ ತಮಗೂ ಈ ಸಮೃದ್ಧವಾದ ತೋಟವನ್ನು ಕಳೆದುಕೊಂಡ ಮೇಲೆ ಸರಿಯಾಗಿ ಪರಿಹಾರ ಸಿಗದಿದ್ದರೆ ಎಂಬ ಕಳವಳ ವ್ಯಕ್ತಪಡಿಸಿದರು. ಮತ್ತೊಬ್ಬ ರೈತರಾದ ನಾಗಪ್ಪ ಗಾಂವಕರ ಅವರು ಇದು ಗುಡ್ಡ ಗಾಡು ಪ್ರದೇಶವಾದ್ದರಿಂದ ಮಾರ್ಗವನ್ನು ನೇರ ಗೊಳಿಸುವ ಸಂದರ್ಭದಲ್ಲಿ ಬಾಕ್ಸ ಕಟಿಂಗ್ ನಡೆದು ರೈಲು ಮಾರ್ಗದ ಎರಡೂ ಪಕ್ಕದವರೂ ತೊಂದರೆಗೊಳಗಾಗಬೇಕಾಗುತ್ತದೆ. ಮೇಲ್ಭಾಗದಿಂದ ಕೆಳಭಾಗಕ್ಕೆ ಅಂತರ್ಜಲದ ಹರಿವು ನಿಂತು ಕೆಳಭಾಗದ ಪ್ರದೇಶ ಬಂಜರು ಭೂಮಿಯಾಗುವ ಸಂಭವವಿರುವುದಾಗಿ ಹೇಳಿದರು. ಹಿಂದೆ ಕೃಷ್ಣ ಮೆನನ್ ಅವರ ಸಮಯದಲ್ಲಿ ಇದೇ ಪ್ರದೇಶದಲ್ಲಿ ರಸ್ತೆ ನಿರ್ಮಾಣಕ್ಕಾಗಿ ಸರ್ವೆ ನಡೆದಿತ್ತೆಂದು ಜ್ಞಾಪಿಸಿಕೊಂಡರು. ಈ ಸಂದರ್ಭದಲ್ಲಿ ಹಾಜರಿದ್ದ ಇತರ ಕೆಲ ರೈತರು ಸಹ ತಮ್ಮ ಅಳಲನ್ನು ಹೇಳಿಕೊಂಡರು.

ವಿಚಾರಗೋಷ್ಠಿಯು ತೇಲಂಗಾರದ ಮೈತ್ರಿ ಕಲಾಬಳಗದ ಸಭಾಭವನದಲ್ಲಿ ನಡೆಯಿತು. ಅದರಲ್ಲಿ ಹುಬ್ಬಳ್ಳಿ _ಅಂಕೋಲಾ ರೈಲು ಮಾರ್ಗ ನಿರ್ಮಾಣ ಯೋಜನೆಯಿಂದ ಪ್ರಭಾವಕ್ಕೊಳಗಾಗುವ ತೇಲಂಗಾರ ಮತ್ತು ಸುತ್ತಮುತ್ತಲಿನ ಜನರು ಪಾಲ್ಗೊಂಡಿದ್ದರು. ಕಾರ್ಯಕ್ರಮಕ್ಕೆ ಎಲ್ಲರಿಗೂ ಸ್ವಾಗತ ಕೋರುತ್ತ ಮಾತನಾಡಿದ ಜಿ.ಎಸ್.ಗಾಂವಕರ ಅವರು ಈ ವಿಚಾರಗೋಷ್ಠಿಯಲ್ಲಿ ರೈಲು ಮಾರ್ಗ ನಿರ್ಮಾಣದಿಂದ ಇಲ್ಲಿಯ ಪರಿಸರದ ಮೇಲಾಗುವ ಪರಿಣಾಮ, ಅದರ ಸಾದಕ ಬಾದಕಗಳ ಕುರಿತು ಚರ್ಚೆಯಾಗಬೇಕೆಂದರು.

ಕೆ.ವಿ.ಭಟ್ ಅವರು ಮಾತನಾಡಿ ಘಟ್ಟ ಪ್ರದೇಶಗಳಲ್ಲಿ ರೈಲ್ವೆ ಮಾರ್ಗ ನಿರ್ಮಾಣ ಎಷ್ಟು ಯೋಗ್ಯ ಎಂಬ ಪ್ರಶ್ನೆ ಮುಂದಿಟ್ಟರು. ಮಾಗೋಡ- ತೇಲಂಗಾರ _ ಕಂಚೀಮನೆ ವರೆಗೆ ದಟ್ಟ ಅರಣ್ಯ ಪ್ರದೇಶದಲ್ಲಿ ಹಾದು ಹೋಗುವ್ಯದರಿಂದ ಬಹಳಷ್ಟು ಪ್ರಮಾಣದಲ್ಲಿ ಅರಣ್ಯನಾಶವಾಗುತ್ತದೆ. ಅಲ್ಲದೆ ತೇಲಂಗಾರ _ ಕಂಚೀಮನೆ ನಡುವೆ ಅನವಶ್ಯಕವಾಗಿ ಸುತ್ತಿಬಳಸಿ ಯು (U) ಆಕಾರದಲ್ಲಿ ಸುತ್ತಿ ಬರುವ ಬದಲು ನೇರವಾಗಿ ಮಾರ್ಗ ನಿರ್ಮಿಸಿದಲ್ಲಿ 10 ಕಿ.ಮೀ.ಗಳಷ್ಟು ಅರಣ್ಯ ನಾಶ ಕಡಿಮೆ ಯಾಗುತ್ತದೆ. ಈ ಯೋಜನೆಯನ್ನು ವಿರೋಧಿಸಿ ಹೋರಾಡುವುದಾದರೆ ಜನರು ಸಂಘಟಿತರಾಗಬೇಕು. ಅಥವಾ ರೈಲು ಮಾರ್ಗ ನಿರ್ಮಾಣವಾಗೇ ತೀರುತ್ತದೆ ಎಂದರೆ ಆದಷ್ಟು ಕಡಿಮೆ ಅರಣ್ಯ ನಾಶವಾಗುವಂತೆ ನೋಡಿಕೊಳ್ಳಬೇಕು ಎಂದರು.

ರೈಲು ಮಾರ್ಗ ನಿರ್ಮಾಣದಿಂದ ಹಾನಿಗೊಳಗಾಗುವವರಲ್ಲಿ ಒಬ್ಬರಾದ ಯಲ್ಲಾಪುರದ ವಸಂತ ನಾಯ್ಕ ಅವರು ಯೋಜನೆ ಕುರಿತು ತಾವು ಸಂಗ್ರಹಿಸಿದ ಮಾಹಿತಿಗಳನ್ನು ಸಭೆಯ ಮುಂದಿಟ್ಟರು. ರೈಲು ಮಾರ್ಗ ನಿರ್ಮಾಣವನ್ನು ವಿರೋಧಿಸಿ ತಾವು ನಡೆಸಿದ ಹೋರಾಟದ ವಿವರಗಳನ್ನು ಸಭೆಗೆ ತಿಳಿಸಿದರು. ತಾವು ನಡೆಸಿದ ಪತ್ರ ವ್ಯವಹಾರಗಳಿಂದ ರೈಲು ಮಾರ್ಗ ನಿರ್ಮಾಣ ನಿಲ್ಲುವುದಿಲ್ಲವೆಂದು ಅರ್ಥವಾದಾಗ ಆದಷ್ಟು ಬೇಗ ರೈಲು ಮಾರ್ಗ ನಿರ್ಮಾಣವಾಗಲಿ, ತಮಗೆ ಆದಷ್ಟು ಬೇಗ ಪರಿಹಾರವಾದರೂ ಸಿಗಲಿ ಎಂಬ ನಿಟ್ಟಿನಲ್ಲಿ ಪ್ರಯತ್ನ ನಡೆಸುತ್ತಿರುವುದಾಗಿ ಹೇಳಿದರು. ಈಗ ಅಗಸೂರು _ ಕಲಘಟಗಿ ವರೆಗೆ ಪರಿಹಾರ ನೀಡುವ ಕಾರ್ಯ ನಡೆದಿದೆ. ಬರುವ ಡಿಸೆಂಬರ್ ಒಳಗೆ ಯಲ್ಲಾಪುರದ ಜನರಿಗೂ ಪರಿಹಾರ ಸಿಗಬಹುದು ಎಂಬ ಆಶಯ ವ್ಯಕ್ತಡಿಸಿದರು. ಅದಕ್ಕಾಗಿ ರೈಲು ಮಾರ್ಗ ನಿರ್ಮಾಣವನ್ನು ವಿರೋಧಿಸುವುದು ಬೇಡವೆಂದರು.

ಪರಿಸರ ಸಂರಕ್ಷಣಾ ಕೇಂದ್ರದ ಪಾಂಡುರಂಗ ಹೆಗಡೆಯವರು ಮಾತನಾಡಿ ಈ ರೈಲು ಮಾರ್ಗ ನಿರ್ಮಾಣದಿಂದ ಈಗಾಗಲೇ ಯೋಜನೆಗಳ ಭಾರದಿಂದ ನಲುಗುತ್ತಿರುವ ಉತ್ತರ ಕನ್ನಡ ಜಿಲ್ಲೆಗೆ ಮತ್ತಷ್ಟು ಭಾರ ಹೊರಿಸುತ್ತದೆ. ಸದ್ಯದ ಉಪಗ್ರಹ ಚಿತ್ರದ ಮಹಿತಿ ಪ್ರಕಾರ ಈ ಪ್ರದೇಶದಲ್ಲಿ ಈಗ ಕೇವಲ 35% ಮಾತ್ರ ಅರಣ್ಯವಿದೆ. ಈಗಾಗಲೇ ಹಲವಾರು ಯೋಜನೆಗಳಲ್ಲಿ ನಿರಾಶ್ರಿತರಿಗಾದ ಹಾಗೆ ಈ ಯೋಜನೆಯಲ್ಲೂ ಸರಿಯಾದ ಪರಿಹಾರ ಸಿಗುವ ಸಾಧ್ಯತೆಯಿಲ್ಲ. ಅಲ್ಲದೆ ಕೇಂದ್ರ ಪರಿಸರ ಇಲಾಖೆಯು ಈ ಯೋಜನೆಗೆ ಅನುಮತಿ ನೀಡಿಲ್ಲ. ಆದ್ದರಿಂದ ರೈಲು ಮಾರ್ಗ ನಿರ್ಮಾಣ ಯೋಜನೆಯು ವಿಳಂಬವಾಗಬಹುದು. ಮಾರ್ಗ ನಿರ್ಮಾಣವಾಗುವವರೆಗೆ ಪರಿಹಾರ ದೊರೆಯದು. ಹೀಗೆ ನಿರಾಶ್ರಿತರಾಗುವವರು ಅತಂತ್ರರಾಗುವ ಸಂಭವವಿದೆ. ಈಗಾಗಲೇ ಅರಬೈಲ್ ಪ್ರದೇಶದ ಭುಕುಸಿತವು ಉತ್ತರ ಕನ್ನಡದ ಪರಿಸರದಲ್ಲಿ ಏರುಪೇರಾಗಿರುವುನ್ನು ಸೂಚಿಸುತ್ತದೆ. ದೇಶಕ್ಕಾಗಿ ಜಿಲ್ಲೆಯ ಜನರು ಇನ್ನೂ ತ್ಯಾಗ ಮಾಡುವುದರಲ್ಲಿ ಅರ್ಥವಿಲ್ಲ. ಜಿಲ್ಲೆಯ ಸದ್ಯದದ ಭೌಗೋಳಿಕ, ಆರ್ಥಿಕ ಸ್ಥಿತಿಯ ಬಗ್ಗೆ ತಜ್ಞರಿಂದ ಸಂಶೋಧನೆ ನಡೆಸಬೇಕಾಗಿದೆ. ಜಿಲ್ಲೆಯ ಪರಿಸರ ರಕ್ಷಣೆಗೆ ಜನರು ಸಂಘಟಿತರಾಗಬೇಕಾಗಿದೆ. ಕಬ್ಬಿಣ ಅದಿರು ಸಾಗಣಿಕೆಗೆ ಬದಲಿ ಮಾರ್ಗ ಸಾಧ್ಯತೆಯಕುರಿತು ಚಿಂತನೆ ನಡೆಯಬೇಕು ಎಂದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಶಿವರಾಮ ಭಟ್ಟ ಅವರು ಯೋಜನೆ ಆಗುತ್ತದೆ ಎಂದರೆ ಆಗಲಿ ಅದರೆ ಆದಷ್ಟು ಕಡಿಮೆ ಪರಿಸರ ನಾಶವಾಗುವಂತೆ ನೋಡಿಕೊಳ್ಳಬೇಕು. ಸಂಭಂದಿತರಿಗೆ ಬೇಗ ಪರಿಹಾರ ದೊರಕಬೇಕು ಎಂದರು

ಈ ಸಂದರ್ಭದಲ್ಲಿ ಬಿ.ಜಿ.ಹೆಗಡೆ ಗೇರಾಳ,ಯಲ್ಲಾಪುರದ ಮಾರುದ್ರಪ್ಪ ನೆಲ್ಲಿಕಣಿ, ಸ್ಥಳೀಯ ನಾಗರೀಕರು ಉಪಸ್ಥಿತರಿದ್ದರು